# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17 ನಿಗಮ ಕಾರ್ಯಾಲಯ, ಕಾವೇರಿ ಭವನ,

ಬೆಂಗಳೂರು. ದಿನಾಂಕ: 03-03-2017

| NDCPS ಅಧಿಕಾರಿಗಳ / ನೌಕರರ ವೈಯಕ್ತಿಕ ಗಮನಕ್ಕೆ |
|---|

## ಸುತ್ತೋಲೆ

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ ೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪಿಇಟಿ 2005 ದಿನಾಂಕ 31-03-2003

೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ.14/ 4977/2005-06 ದಿನಾಂಕ 05-07-2007

೩. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ 4977/2005-06 ದಿನಾಂಕ 21-08-2007

೪. ಈ ಕಛೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 ದಿನಾಂಕ 21-02-2017

*****

ಉಲ್ಲೇಖ 4 ರಲ್ಲಿರುವ ಈ ಕಛೇರಿ ಸುತ್ತೋಲೆಯಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ

EE(G) 6/3/17

ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ತಂತ್ರಾಂಶದಿಂದ ಪಡೆದು ಅದರ ನಿಖರತೆಯನ್ನು ಪರಿಶೀಲಿಸಿಕೊಳ್ಳುವ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಈ ರೀತಿ ಪಡೆದ ವಿವರಗಳಲ್ಲಿ ವ್ಯತ್ಯಾಸಗಳೇನಾದರೂ ಇದ್ದಲ್ಲಿ ಅದನ್ನು ಸಮುಚಿತ ಮಾರ್ಗದಲ್ಲಿ ಕೆಇಎನ್‌ಡಿಸಿಪಿಎಸ್ ಘಟಕದ ಗಮನಕ್ಕೆ ತಂದಲ್ಲಿ ಅದನ್ನು ಪರಿಶೀಲಿಸಿ ಅಗತ್ಯವಿದ್ದರೆ ಸರಿಪಡಿಸಲಾಗುವುದು ಎಂದೂ ಸಹ ತಿಳಿಸಲಾಗಿತ್ತು. ಆದರೆ ಕೆಲವು ನೌಕರರು ಅವರು ಗಮನಿಸಿದ ವ್ಯತ್ಯಾಸವನ್ನು ಸರಿಪಡಿಸಲು ಸಮುಚಿತ ಮಾರ್ಗದಲ್ಲಿ ಸಲ್ಲಿಸದೆ ನೇರವಾಗಿ ಕೆಇಎನ್‌ಡಿಸಿಪಿಎಸ್ ಘಟಕವನ್ನು ಕೋರುತ್ತಿರುವುದನ್ನು ಗಮನಿಸಲಾಗಿದೆ.

ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ **(NDCPS)** ವ್ಯಾಪ್ತಿಯ ಅಧಿಕಾರಿ / ನೌಕರರ ಸಂಬಳದಿಂದ ಪ್ರತಿ ತಿಂಗಳೂ ಮುರಿದುಕೊಳ್ಳಲಾಗುವ ಪಿಂಚಣಿ ವಂತಿಗೆ ವಿವರಗಳನ್ನು ಸಂಬಂಧಪಟ್ಟ ಲೆಕ್ಕ ಘಟಕಗಳು ಅನುಬಂಧ – 4 ರಲ್ಲಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುತಲಿದ್ದು ಅಲ್ಲಿರುವ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿತ್ತು. ಅಂದರೆ ತಂತ್ರಾಂಶದಲ್ಲಿರುವ ನೌಕರರ / ಆದಿಕಾರಿಗಳ ಪಿಂಚಣಿ ವಂತಿಗೆ ವಿವರಗಳು ಅನುಬಂಧ – 4 ರಲ್ಲಿರುವ ವಿವರಗಳನ್ನು ಆಧರಿಸಿರುತ್ತದೆ. ಅನುಬಂಧ – 4 ರಲ್ಲಿ ಸಾಮಾನ್ಯವಾಗಿ ಗಮನಿಸಲಾದ ತಪ್ಪುಗಳು ಈ ಕೆಳಕಂಡಂತಿರುತ್ತದೆ.

1. ಅಧಿಕಾರಿ / ನೌಕರರ ಸಂಬಳದಿಂದ ವಾಸ್ತವಿಕವಾಗಿ ಮುರಿದುಕೊಳ್ಳಲಾದ ಪಿಂಚಣಿ ವಂತಿಗೆ ವಿವರಗಳನ್ನು ಅನುಬಂಧ – 4 ರಲ್ಲಿ ನಮೂದಿಸದೇ ಇರುವುದು. ಆ ಕಾರಣ ಪಿಂಚಣಿ ವಂತಿಗೆಯೂ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಂದಾಯವಾಗುವುದಿಲ್ಲ.
2. ಅಧಿಕಾರಿ / ನೌಕರರ PPAN ಅನ್ನು ಲೆಕ್ಕಘಟಕಗಳು ಅನುಬಂಧ – 4 ರಲ್ಲಿ ಸರಿಯಾಗಿ ನಮೂದಿಸದೇ ಇರುವುದು.
3. ಒಂದೇ ಹೆಸರಿನ ಇಬ್ಬರು ಮೂವರು ನೌಕರರಿದ್ದರೆ ಅವರ PPAN ಮತ್ತು ಪಿಂಚಣಿ ವಂತಿಗೆಯನ್ನು ಅನುಬಂಧ – 4 ರಲ್ಲಿ ಅದಲು ಬದಲು ಮಾಡುವುದು.

4. ಕೆಲವು ಕಂಪನಿಗಳು ಪಿಂಚಣಿ ವಂತಿಗೆ ಪಾವತಿಸುವಾಗ ಲೆಕ್ಕ ಘಟಕಗಳ ಯಾದಿಯಲ್ಲಿ ಕೆಲವು ಲೆಕ್ಕ ಘಟಕಗಳನ್ನೆ ಬಿಟ್ಟುಬಿಡುವುದು. ಇದರಿಂದ ಅಂತಹ ಲೆಕ್ಕಘಟಕಗಳ ಪಿಂಚಣಿ ವಂತಿಗೆ ಸಂದಾಯವಾಗಿರುವುದಿಲ್ಲ. ಈ ಸಂಬಂಧ ಪತ್ರ ವ್ಯವಹಾರ ಮಾಡಲಾಗಿರುತ್ತದೆ.

5. ಅನುಬಂಧ – 4 ರಲ್ಲಿ ಕೆಲವು ನೌಕರರಿಗೆ ಸಂಬಂಧಿಸಿದಂತೆ ಪಿಂಚಣಿ ವಂತಿಗೆಯ ಮುರಿಕೆಯನ್ನು ಎರಡು ಬಾರಿ ನಮೂದಿಸಿ ಅದು ಯಾವ ಅವಧಿಗೆ ಸಂಬಂಧಪಟ್ಟಿದೆ ಎನ್ನುವುದನ್ನು ನಮೂದಿಸದೇ ಇರುವುದು.

6. ಸದರಿ ಯೋಜನೆ ವ್ಯಾಪ್ತಿಯ ನೌಕರರು ಒಂದು ಲೆಕ್ಕ ಘಟಕದಿಂದ ಇನ್ನೊಂದು ಲೆಕ್ಕ ಘಟಕಕ್ಕೆ ವರ್ಗಾವಣೆಗೊಂಡಾಗ ವರ್ಗಾವಣೆಗೊಂಡ ಲೆಕ್ಕಘಟಕವು ನೌಕರನ PPAN ಅನ್ನು ತಿಳಿದುಕೊಳ್ಳಲು ಪ್ರಯತ್ನಿಸದೆ ನೌಕರರಿಂದ ಹೊಸದಾಗಿ ಅನುಬಂಧ– 1 ನ್ನು ಪಡೆದು ತಪ್ಪು ಮಾಹಿತಿ ನೀಡಿ ಹೊಸದಾಗಿ PPAN ಪಡೆದು ಅದೇ ನೌಕರರಿಗೆ ಎರಡು PPAN ಅನ್ನು ನೀಡುವಂತಾಗಿದೆ. ಇದರಿಂದ ಅಂತಹ ನೌಕರರಿಗೆ ಎರಡು ಖಾತೆ ಜಾರಿಯಲ್ಲಿ ಇದ್ದಂತಾಗುತ್ತದೆ.

ಈ ಮೇಲೆ ತಿಳಿಸಲಾದ ರೀತಿಯ ತಪ್ಪುಗಳನ್ನು ಸರಿಪಡಿಸಿ ಸದರಿ ಯೋಜನೆ ವ್ಯಾಪ್ತಿಯ ನೌಕರರ ಖಾತೆಗೆ ಸರಿಯಾದ ಪಿಂಚಣಿ ವಂತಿಗೆಯ ಮೊತ್ತವನ್ನು ಜಮಾ ನೀಡಲು ಕೆಇಎನ್‌ಡಿಸಿಪಿಎಸ್ ಘಟಕವು ಕ್ರಮ ತೆಗೆದುಕೊಂಡಿದ್ದರೂ ಸಹಿತ ಕೆಇಎನ್‌ಡಿಸಿಪಿಎಸ್ ಘಟಕದ ಗಮನಕ್ಕೆ ಬಾರದೆ ತಪ್ಪುಗಳು ಮುಂದುವರೆದಿರುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಈ ಹಿನ್ನಲೆಯಲ್ಲಿಯೇ, ಸದರಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರ ಪಿಂಚಣಿ ವಂತಿಗೆ ವಿವರಗಳನ್ನು LIC-P&GS Unit ಸಂಸ್ಥೆಗೆ ನೀಡುವ ಮೊದಲು ಅವುಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದಲೇ ಎಲ್ಲಾ ಲೆಕ್ಕಘಟಕಗಳಿಗೂ ಮತ್ತು ಸದರಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರಿಗೆ ಒಂದು ಅವಕಾಶವನ್ನು ನೀಡಲಾಗಿದೆಯೆನ್ನುವುದನ್ನು ಗಮನಿಸುವುದು.

ಸದರಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರು ಗಮನಿಸಲಾದ ತಪ್ಪುಗಳನ್ನು ಸರಿಪಡಿಸಲು ವಿವರಗಳನ್ನು ಸಮುಚಿತ ಮಾರ್ಗದಲ್ಲಿ(Through Proper Channel) ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುವಂತೆ ನಿಗದಿ ಪಡಿಸಿರುವುದರಿಂದ ಸಂಬಂಧಪಟ್ಟ ಲೆಕ್ಕ ಘಟಕವು ಅದನ್ನು ಬರವಣಿಗೆಯಲ್ಲಿ ಪಡೆದು ಲೆಕ್ಕಘಟಕದ ಷರಾದೊಂದಿಗೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ನಿಗದಿತ ದಿನಾಂಕದೊಳಗೆ ಕಳುಹಿಸುವಂತೆ ಸೂಚಿಸಲಾಗಿದೆ.

ಈ ಸುತ್ತೋಲೆಯನ್ನು ಲೆಕ್ಕ ಘಟಕ ಮತ್ತು ತಮ್ಮ ವ್ಯಾಪ್ತಿಯ ಇತರೆ ಕಚೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸಿ ಸಂಬಂದಿಸಿದ ಎಲ್ಲಾ ನೌಕರರಿಗೆ ವಿಷಯ ತಿಳಿಸಲು ಸರ್ವ ಪ್ರಯತ್ನ ಮಾಡುವಂತೆ ಕೋರಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,
೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,
೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೫. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** **http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅ.ಅ (ಐ.ಟಿ ಮತ್ತು ಎಂ ಐ ಎಸ್) ರವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.

೧. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
೨. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೩. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೪. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
೫. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು